5C.R.P.67

| Form No.4 (Civil)<br>Deposition Sheets<br>(R.P.No.57) |
|---|

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 73/2022

ದಿನಾಂಕ ಃ 15.07.2025 ರಂದು ಪ್ರಮಾಣ ವಚನ ಬೋಧಿಸಲಾಗಿದೆ.

ಸಿ. ಡಬ್ಲ್ಯೂ:9 ಪಿ. ಡಬ್ಲ್ಯೂ:10

| | |
|---|---|
| ಸಾಕ್ಷಿದಾರರ ಹೆಸರು | ಕೆಂಪಯ್ಯ |
| ತಂದೆಯ ಹೆಸರು | ಮಾದಯ್ಯ |
| ವಯಸ್ಸು | 68 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕಿರಗಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಪ್ರಾಸಾ. 1, 3 ರಿಂದ 5 ಗೊತ್ತು. ನಾನು ಕಿರಗಸೂರು ಊರಿನಲ್ಲಿ ಯಜಮಾನನಾಗಿರುತ್ತೇನೆ. ನಮ್ಮ ಊರಿನ ಶೇಖರ್ ಪ್ರಾಸಾ. 3 ರವರಿಗೆ ಒಂದು ಹೆಣ್ಣು, ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಸದರಿ ಪ್ರಾಸಾ. 3 ರವರ ಮಗಳು ಮಾಲಿನಿ 5 ವರುಷಗಳ ಹಿಂದೆ ತೀರಿಕೊಂಡಿರುತ್ತಾಳೆ. ಆಕೆ ತೀರಿಕೊಳ್ಳುವ 13 ವರುಷದ ಮೊದಲು ಆಕೆಯ ಮದುವೆಯು, ವಡ್ಡರಹಳ್ಳಿಯ ಹುಡುಗನೊಂದಿಗೆ ನಡೆದಿತ್ತು. ಸದರಿ ಹುಡುಗನ ಹೆಸರು ನನಗೆ ಗೊತ್ತಿಲ್ಲ. ಮದುವೆ ಮಾತುಕತೆಯು, ಪ್ರಾಸಾ.3 ರವರ ಮನೆಯಲ್ಲಿ ನಡೆದಿತ್ತು. ನಾನೂ ಸಹ ಮದುವೆ ಮಾತುಕತೆಗೆ ಹೋಗಿದ್ದೆನು. ಹುಡುಗನ ಕಡೆಯಿಂದ 5 ಜನ ಬಂದಿದ್ದರು. ಹುಡುಗ, ಆತನ ತಂದೆ ಹಾಗೂ ಆತನ ಗ್ರಾಮದವರು ಬಂದಿದ್ದರು. ಸದರಿ ಮದುವೆ ಮಾತುಕತೆಯಲ್ಲಿ , ಮದುವೆ ನಡೆಸುವ ಬಗ್ಗೆ ಒಪ್ಪಿಗೆಯಾಗಿ ಚಿನ್ನ ಹಾಕುವ ಬಗ್ಗೆ ಮಾತುಕತೆಯಾಗಿತ್ತು. ಹುಡುಗನ ಕಡೆಯವರು ಮತ್ತು ಆತನ ತಂದೆ, ಒಂದು ಬ್ರಾಸ್ಲೈಟ್, ಒಂದು ಉಂಗುರ, ಒಂದು ಲಕ್ಷ ಕೇಳಿದ್ದರು. ಸದರಿ ಲಕ್ಷವನ್ನು ಆಗ ನೀಡಿಲ್ಲ, ಹಿಂದುಳಿದು ನೀಡುತ್ತೇವೆ ಎಂದು ಹುಡುಗಿ ಮನೆಯವರು ಹೇಳಿದ್ದರು.
2. ಮದುವೆಗಿಂತ 15 ದಿನ ಮೊದಲು, ಮದುವೆ ನಿಶ್ಚಿತಾರ್ಥವಾಗಿತ್ತು ಅದರಲ್ಲಿ ಹುಡುಗನಿಗೆ ಒಂದು ಉಂಗುರವನ್ನು ನೀಡಿದ್ದರು.

3. ಸದರಿ ಮದುವೆಯು ಬೆಳಕವಾಡಿಯ ಚಾಮುಂಡೇಶ್ವರಿ ಕಲ್ಯಾಣ ಮಂಟಪದಲ್ಲಿ ನಡೆದಿತ್ತು. ನಾನೂ ಸಹ ಸದರಿ ಮದುವೆಗೆ ಹೋಗಿದ್ದೆನು. ಸದರಿ ಮದುವೆಯಲ್ಲಿ ಹುಡುಗಿಗೆ ಏನು ನೀಡಿಲ್ಲ. ಸದರಿ ಮದುವೆಯಾದ ನಂತರ ಮಾಲಿನಿ ಹಾಗೂ ಆಕೆಯ ಗಂಡ ವಡ್ಡರಹಳ್ಳಿಯಲ್ಲಿ ವಾಸಿಸುತ್ತಿದ್ದರು. ನಾನು ಕಿರಗಸೂರಿನಲ್ಲಿ ಇರುವ ನನ್ನ ನಿವೇಶನದಲ್ಲಿ ವಾಸಿಸುತ್ತಿದ್ದೆನು. ಸದರಿ ಮಾಲಿನಿ ಹಾಗೂ ಆಕೆಯ ಗಂಡನ ನಡುವೆ ಗಲಾಟೆಯಾಗುತ್ತಿತ್ತು ಎಂದು ಹುಡುಗಿಯ ತಂದೆ ಪ್ರಾಸಾ. 3 ರವರು ಹೇಳಿದ್ದರು. ಯಾವ ವಿಚಾರದಲ್ಲಿ ಸದರಿ ಗಲಾಟೆಯಾಗುತ್ತಿತ್ತು ಎಂದು ನನಗೆ ತಿಳಿದಿಲ್ಲ.

4. ಮಾಲಿನಿಯು, ತನ್ನ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ತೀರಿಕೊಂಡಿರುತ್ತಾಳೆ. ಸದರಿ ಮಾಲಿನಿಯು ಯಾವ ಕಾರಣಕ್ಕೆ ನೇಣು ಹಾಕಿಕೊಂಡಳು ಎಂದು ನನಗೆ ಗೊತ್ತಿಲ್ಲ. ಬೆಳಗ್ಗೆ 3.00 ಗಂಟೆ ಸಮಯದಲ್ಲಿ ಮಾಲಿನಿ ತೀರಿಕೊಂಡ ವಿಚಾರ ನನಗೆ ಗೊತ್ತಾಗಿರುತ್ತದೆ. ನಾನೂ ಸಹ ವಡ್ಡರಹಳ್ಳಿಗೆ ಹೋಗಿದ್ದೆನು. ವಡ್ಡರಹಳ್ಳಿಯಲ್ಲಿ ಮಾಲಿನಿಯ ಶವ ದಫನ್ ಕಾಲದಲ್ಲಿ ಮಾಲಿನಿಯ ಶವವನ್ನು ನೋಡಿರುತ್ತೇನೆ. ಮಾಲಿನಿ ಮೃತ ಪಡಲು ಏನು ಕಾರಣ ಎಂದು ಪ್ರಾಸಾ. 3 ರವರನ್ನು ನಾನು ವಿಚಾರಿಸಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ.

5. ನ್ಯಾಯಾಲಯ ಮುಂದೆ ಇರುವ ಆರೋಪಿತರನ್ನು ಸಾಕ್ಷಿಯು ನೋಡಿ ಅವರು, ಮಾಲಿನಿಯ ಗಂಡ ಮತ್ತು ಮಾಲಿನಿಯ ಮಾವ ಎಂದು ಗುರುತಿಸಿರುತ್ತಾರೆ.

6. ಪ್ರಾಸಾ. 3 ರವರು ದೂರುನೀಡಿದ್ದರಿಂದ ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಿದೆ. ತನ್ನ ಮಗಳು ನೇಣು ಹಾಕಿಕೊಂಡು ತೀರಿಕೊಂಡಿದ್ದಾಳೆ ಎಂದು ಪ್ರಾಸಾ. 3 ರವರು ದೂರು ನೀಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

7. ಮದುವೆ ಮಾತುಕತೆಯಲ್ಲಿ 2 ನೇ ಆರೋಪಿಯು ವರದಕ್ಷಿಣೆಯಾಗಿ 50 ಗ್ರಾಂ ತೂಕದ ಚಿನ್ನದ ಚೈನು, ಹಾರ, ಒಂದು ಉಂಗುರ, ಒಂದು ಲಕ್ಷ ಹಣ ಮತ್ತು ಒಡವೆ ಹಾಗೂ ಚೌಲ್ಟ್ರಿಯಲ್ಲಿ ಮದುವೆ ಮಾಡಿಕೊಡುವಂತೆ ಕೇಳಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಸದರಿ ಅವುಗಳನ್ನು ಕೊಟ್ಟಿರುವ ಬಗ್ಗೆ ನನಗೆ ತಿಳಿದಿಲ್ಲ ಎಂದು

ನುಡಿಯುತ್ತಾರೆ. ಆಗ ಹುಡುಗಿಯ ಕಡೆಯವರು, ತಮಗೆ ಅಷ್ಟು ಕೊಡಲು ಆಗುವುದಿಲ್ಲ, ಹುಡುಗನಿಗೆ 20 ಗ್ರಾಂ ಚಿನ್ನದ ಹಾರ, ಒಂದು ಉಂಗುರ, ಹುಡುಗಿಗೆ ಒಂದು ಜೊತೆ ಓಲೆ, ಹ್ಯಾಂಗಿಗ್ಸ್ ಹಾಗೂ ಗೆಜ್ಜೆ ಮಾಟಿ ಕೊಟ್ಟು ಚೌಲ್ಟ್ರಿಯಲ್ಲಿ ಮದುವೆ ಮಾಡಿಕೊಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿ.

8. ಮದುವೆ ಮಂಟಪದಲ್ಲಿ ಹುಡುಗಿಯ ತಂದೆ -ತಾಯಿ, ನನ್ನನ್ನು, ಹಾಗೂ ನರಸಿಂಹಯ್ಯ, ಸಿದ್ದಯ್ಯ, ನಂಜಯ್ಯ ರವರನ್ನು ಕರೆದು ಮಾತುಕತೆಯಂತೆ ಹುಡುಗನಿಗೆ 20 ಗ್ರಾಂ ಚಿನ್ನದ ಹಾರ, ಒಂದು ಉಂಗುರವನ್ನು ಕೊಡುತ್ತಿದ್ದೇವೆ ಬನ್ನಿ ಎಂದು ಕರೆದು ನೀಡಿದ್ದರು ಎಂದರೆ ಸಾಕ್ಷಿಯು ಹುಡುಗಿಗೆ ಕೊಟ್ಟಿರಬಹುದು, ಹುಡುಗನಿಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. 1 ಲಕ್ಷ ಹಣವನ್ನು ನಂತರದಲ್ಲಿ ಕೊಡುವುದಾಗಿ ಕೇಳಿಕೊಂಡಾಗ ಅದಕ್ಕೆ ಆರೋಪಿತರು ಒಪ್ಪಿಕೊಂಡು 20 ಗ್ರಾಂ ಚಿನ್ನದ ಹಾರ ಹಾಗೂ ಒಂದು ಉಂಗುರವನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು, ಒಂದು ಉಂಗುರವನ್ನು ಮಾತ್ರ ಅವರಿಗೆ ನೀಡಿದ್ದರು ಎಂದು ಹೇಳುತ್ತಾರೆ. ಮಾಲಿನಿಯ ಸೋದರತ್ತೆ ಜಯಮ್ಮ ರವರು ಮಾಲಿನಿಗೆ, ಒಂದು ಜೊತೆ ಹ್ಯಾಂಗಿಗ್ಸ್‌ನ್ನು ಹಾಗೂ ಮಾಲಿನಿಯ ಚಿಕ್ಕಮ್ಮ ಕೋಮಲ ರವರು ಒಂದು ಜೊತೆ ಗೆಜ್ಜೆ ಮಾಟಿಯನ್ನು ಹಾಕಿದರು ಎಂದರೆ ಸರಿ.

9. 4 ವರುಷಗಳ ನಂತರ 1 ನೇ ಆರೋಪಿಯು, ಸದರಿ ಮಾಲಿನಿಗೆ, 2 ನೇ ಆರೋಪಿಗೆ ಸರಿಯಾಗಿ ಉಟೋಪಚಾರ ಮಾಡುತ್ತಿಲ್ಲ ಎಂದು ನೆಪ ಮಾಡಿಕೊಂಡು ಬೈದು, ಆಕೆಗೆ ಹೊಡೆದು ತೊಂದರೆ ಕೊಡುತ್ತಾನೆ ಎಂಬ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಆ ನಂತರ ಹುಡುಗಿಯ ತಂದೆ ನನಗೆ ಸಿಕ್ಕಿ, 1 ನೇ ಆರೋಪಿಯು, ವರದಕ್ಷಿಣೆ ಕೇಳುವಾಗಿ 1 ಲಕ್ಷ ಹಣ ಕೇಳಿದೆನೆಂದು, ಮದುವೆಯ ನಂತರದಲ್ಲಿ ಕೊಡುತ್ತೇನೆ ಎಂದು ಹೇಳಿ, ಸದರಿ ಹಣವನ್ನು ತೆಗೆದುಕೊಂಡು ಬಾ ಹಾಗೂ ಅದರ ಜೊತೆ ಮತ್ತಷ್ಟು ಚಿನ್ನದ ಒಡವೆಗಳನ್ನು ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿ ಸದರಿ ಹೇಳಿಕೆಯನ್ನು ಮಾಲಿನಿಯನ್ನು ತವರು ಮನೆಗೆ ಕಳುಹಿಸುತ್ತಿದ್ದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಮಾಲಿನಿಯ ತಮ್ಮ ಮನೆಗೆ ಬಂದಾಗೆಲ್ಲ, ಹಣ, ಒಡವೆ ಉಂಗುರವನ್ನು ಮಾಡಿಸಿಕೊಟ್ಟು ಚೆನ್ನಾಗಿರು ಎಂದು ಹೇಳಿ ಕಳುಹಿಸಿಕೊಡುತ್ತಿದ್ದೆವು ಎಂದು ಪ್ರಾಸಾ. 3 ರವರು ಹೇಳಿದ್ದರು ಎಂದರೆ ಸರಿ. ಆದರೂ ಸಹ ಆರೋಪಿತರಿಗೆ ಹಣದ ದಾಹ ತೀರದೇ, ಮತ್ತೆ ಮತ್ತೆ ಸದರಿ ಮಾಲಿನಿಗೆ ನಿಮ್ಮಪ್ಪನ ಮನೆಯಿಂದ ಹಣ, ಒಡವೆ ತರುವಂತೆ ಆ ಮಾಲಿನಿಗೆ ಹೊಡೆಯುವುದು, ಬೈಯುವುದು ಮಾನಸಿಕವಾಗಿ ಕಿರುಕುಳ ಕೊಡುವುದು ಮಾಡುತ್ತಿದ್ದರೆಂದು ತನಗೆ ಪ್ರಾಸಾ.3 ರವರು

ತಿಳಿಸಿದರು ಎಂದರೆ ಸರಿ. ಆಗ ಸದರಿ ಆರೋಪಿತರು ನಡೆದುಕೊಳ್ಳುತ್ತಿರುವುದು ಸರಿಯಲ್ಲ ಎಂದು ನ್ಯಾಯ ಪಂಚಾಯ್ತಿ ಮಾಡುವುದಾದರೆ ನಮ್ಮನ್ನು ಕರೆಯಿರಿ ಬುದ್ದಿ ಹೇಳುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಮತ್ತೊಂದು ದಿನ ಮಾಲಿನಿಯ ತಂದೆ ಶೇಖರ್ ಮಳವಳ್ಳಿಯಲ್ಲಿ ಸಿಕ್ಕಿದಾಗ, ನಿಮ್ಮನ್ನು ಕರೆದುಕೊಂಡು ಹೋಗಿ ನ್ಯಾಯಾ ಪಂಚಾಯಿತಿ ಮಾಡಿದರೆ, ಅಳಿಯ ಮತ್ತು ಬೀಗರು ಸಿಟ್ಟು ಮಾಡಿಕೊಂಡು ಮತ್ತೆ ಆಕೆಗೆ ಕಿರುಕುಳ ನೀಡಬಹುದೆಂದು ಯೊಚನೆ ಮಾಡಿ ತಾನು ಮತ್ತು ತನ್ನ ಹಿರಿಯ ಮಗ 2 ರಿಂದ 3 ಬಾರಿ ಅಳಿಯ ಮತ್ತು ಬೀಗರ ಮನೆಗೆ ಹೋಗಿ ಅವರ ಕೇಳಿದಷ್ಟು ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದಲ್ಲದೇ ಮಧ್ಯ ಮಧ್ಯ ಚಿನ್ನದ ಉಂಗುರ ಮತ್ತು 50 ಸಾವಿರ ವರೆಗೆ ಹಣವನ್ನು ಕೊಟ್ಟಿದ್ದರೂ ಸಹ ತಮ್ಮ ಮಗಳಿಗೆ ಯಾಕೆ ತೊಂದರೆ ಕೊಡುತ್ತೀರಾ ಎಂದು, ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ತಿಳುವಳಿಕೆ ಹೇಳಿ ಬಂದರೆಂದು ಪ್ರಾಸಾ. 3 ವರು ತಿಳಿಸಿದರು ಎಂದರೆ ಸರಿಯಲ್ಲ. ಆ ರೀತಿ ಚೆನ್ನಾಗಿ ನೋಡಿಕೊಳ್ಳುವಂತೆ ಎಂದು ಆರೋಪಿತರು ಹೇಳಿದ ನಂತರವೂ ಸಹ ಮತ್ತೆ ಮತ್ತೆ ಹಣ ಒಡವೆ ತೆಗೆದುಕೊಂಡು ಬಾ ಎಂದು ಆರೋಪಿತರು ಬೈದು ತೊಂದರೆ ಕೊಡವುದು ಮಾಡುತ್ತಿದ್ದ ಬಗ್ಗೆ ಮತ್ತು ನಿನ್ನ ಮತ್ತು ನಿನ್ನ ಮಕ್ಕಳನ್ನು ಸಾಕಲು 1 ಲಕ್ಷ ಹಣವನ್ನು ತವರು ಮನೆಯಿಂದ ಪಡೆದುಕೊಂಡು ಬರುವಂತೆ ಇಲ್ಲವಾದರೆ ನೇಣು ಹಾಕುವಂತೆ ಬೆದರಿಕೆ ಹಾಕುತ್ತಿದ್ದರು ಎಂದು ಪ್ರಾಸಾ. 3 ರವರು ನನಗೆ ತಿಳಿಸಿದರು ಎಂದರೆ ಸರಿ. ವಡ್ಡರಹಳ್ಳಿಗೆ ಬಂದು ನಮ್ಮನ್ನು ಕರೆಯಿರಿ, ನಿಮ್ಮ ಎದುರಿನಲ್ಲಿ ಅವರಿಗೆ ಬುದ್ದಿ ಹೇಳುತ್ತೇನೆ ಎಂದು ನಾನು ಹೇಳಿದೆನು ಎಂದರೆ ಸರಿಯಲ್ಲ.

10. ದಿಃ 04.10.2020 ರಂದು 1 ನೇ ಆರೋಪಿಯ ಹೆಂಡತಿ ಮಾಲಿನಿ ತೀರಿಕೊಂಡಳು ಎಂದರೆ ನನಗೆ ದಿನಾಂಕ ಗೊತ್ತಿಲ್ಲ.

11. ನಾನು ಆಸ್ಪತ್ರೆಯಲ್ಲಿ ಶೇಖರ್ ರವರನ್ನು ಭೇಟಿಯಾದೆನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಸ್ಪತ್ರೆ ಹೋಗಿದ್ದೆನು, ಶೇಖರ್ ರವರನ್ನು ಭೇಟಿಯಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ಶೇಖರ್ - ಮಾಲಿನಿಯ ತಂದೆ, ತಮ್ಮ ಮಗಳು ಸಾಯುವ ಹಿಂದಿನ 2 ದಿನಗಳಲ್ಲಿ ಫೋನ್ ಮಾಡಿ ಬರುವಂತೆ ಹೇಳಿದ್ದರಿಂದ ತನ್ನ ಹೆಂಡತಿ ಹಾಗೂ ಕಿರಿಯ ಮಗ ಆರೋಪಿತರ ಮನೆಗೆ ಹೋಗಿದ್ದಾಗ, ಆರೋಪಿತರು ಸಂಸಾರದ ವಿಚಾರದಲ್ಲಿ ಮತ್ತು ವರದಕ್ಷಿಣೆಯನ್ನು ಹೆಚ್ಚು ತರಲಿಲ್ಲವೆಂದು ಪದೇ ಪದೇ ಬೈದು ಹೊಡೆದು ಕಿರುಕುಳ ನೀಡುತ್ತಿದ್ದಾರೆಂದು ಅಪ್ಪ ಹಾಗೂ ತಮ್ಮ ಇಬ್ಬರೂ ಬಂದು ತಿಳುವಳಿಕೆ ಹೇಳಿದರೂ ಸಹ ಮತ್ತೆ ಮತ್ತೆ ಕಿರುಕುಳ ನೀಡುತ್ತಿದ್ದಾರೆಂದು, ನೀನು ನಿಮ್ಮ ಅಪ್ಪನ ಮನೆಯಿಂದ ಹಣ ತರದಿದ್ದರೆ

ನೀನು ಬದುಕಿರುವ ಬದಲು ಸಾಯುವುದು ಲೇಸು ಎಂದು ಆರೋಪಿತರು ಹೇಳುತ್ತಿದ್ದಾರೆಂದು ಆರೋಪಿತರು ತನ್ನ ಹೆಂಡತಿಯ ಬಳಿ ಹೇಳಿ ಕಳುಹಿಸಿದರು ಎಂದು ನನಗೆ ತಿಳಿಸಿದರು ಎಂದರೆ ಸರಿಯಲ್ಲ.

12. ದಿಃ 04.10.2020 ರಂದು ಆರೋಪಿತರ ಮನೆಯಲ್ಲಿ ಜೋರಾಗಿ ಜಗಳ ಕೇಳುತ್ತಿದ್ದು, 10.45 ರಿಂದ 11.00 ಗಂಟೆ ಸಮಯದಲ್ಲಿ 1 ನೇ ಆರೋಪಿಯ ಹೆಂಡತಿ ಮಾಲಿನಿ ಮನೆಯ ಮುಂದೆ ಬಟ್ಟೆ ತೊಳೆಯುತ್ತಿದ್ದು ಸ್ವಲ್ಪ ಹೊತ್ತಿನಲ್ಲಿ 1 ನೇ ಆರೋಪಿಯು, ಆತನ ಹೆಂಡತಿ ನೇಣು ಹಾಕಿಕೊಂಡಿದ್ದಾಳೆ ಎಂದು ಜೋರಾಗಿ ಕೂಗಿಕೊಂಡಾಗ ನಾವು ಹೋಗಿ ನೋಡಿದೆವು ಎಂದರೆ ಸರಿಯಲ್ಲ.

13. ತವರು ಮನೆಯಿಂದ ಹಣ ಒಡವೆ ತರುವಂತೆ ಆರೋಪಿತರು ಕಿರುಕುಳ ನೀಡುತ್ತಿದ್ದುದರಿಂದ 1 ನೇ ಆರೋಪಿಯ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿದ್ದು ಆಕೆಯು, ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿತರ ಪ್ರಚೋದನೆ ಕಾರಣವಾಗಿರುತ್ತದೆ ಎಂದರೆ ಸಾಕ್ಷಿಯು ಮಾಲಿನಿ ತೀರಿಕೊಂಡ ನಂತರ ಸದರಿ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ದಿಃ 06.10.2020 ರಂದು ನಾನು ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು ಎಂದರೆ ಸರಿ. ಸದರಿ ವಿಚಾರಣೆ ಮಾಡಿದಾಗ, ಮಾಲಿನಿಯ ಮನೆಯವರು, 1 ಲಕ್ಷ ರೂ. ಹಣವನ್ನು ಹಿಂದುಳಿದು ಕೊಡುತ್ತೇನೆಂದು ಒಪ್ಪಿಕೊಂಡ ಬಗ್ಗೆ ಸಾಕ್ಷಿಯು ಮತ್ತು ಆ ಹಣವನ್ನು ತೆಗೆದುಕೊಂಡು ಬಾ ಎಂದು ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಆರೋಪಿತರು ಮಾಲಿನಿಗೆ ನೀಡುತ್ತಿದ್ದರೆಂಬ ಬಗ್ಗೆ ಮತ್ತು ಸದರಿ ಮಾಲಿನಿಯು ಆರೋಪಿತರ ಮಾನಸಿಕ ಮತ್ತು ದೈಹಿಕ ಹಿಂಸೆಯಿಂದ ಆತ್ಮಹತ್ಯೆ ಮಾಡಿಕೊಂಡಳೆಂದು ಹೇಳಿಕೆಯನ್ನು ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ‘‘ ಮದುವೆ ಮಂಟಪದಲ್ಲಿ ...................................... ಈಸಿಕೊಂಡರು ’’ ಹಾಗೂ ‘‘ ಒಂದು ದಿವಸ ಮಾಲಿನಿಯ ತಂದೆ ...................................... ಕಿರುಕುಳ ನೀಡಿ ಕಳುಹಿಸುತ್ತಿದ್ದ ’’ ಹಾಗೂ ‘‘ ಅದಕ್ಕೆ ಯಾಕೆ ಆ ರೀತಿ ...................................... ನಮ್ಮನ್ನು ಕರೆಯಲಿಲ್ಲ’’ ಹಾಗೂ ‘‘ಆದರೆ ದಿನಾಂಕ ...................................... ಕಾರಣರೆಂದು ಹೇಳಿದರು ’’ ಎಂಬ ಭಾಗಗಳನ್ನು ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯ ಭಾಗಗಳನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗಗಳನ್ನು ನಿಪಿ.20, ನಿಪಿ.20(ಎ), ನಿಪಿ.20(ಬಿ) ಮತ್ತು ನಿಪಿ.20(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ ಎನ್ ಆರ್ ವಕೀಲರಿಂದಃ**

14. ನಾನು ಸುಮಾರು 20 ವರುಷದಿಂದ ಕಿರಗಸೂರು ಊರಿನಲ್ಲಿ ಯಜಮಾನಿಕೆ ಮಾಡುತ್ತೇನೆ. ಫ್ರಾಸಾ. 3 ರವರು ನನಗೆ ದಾಯಾದಿಯಾಗಬೇಕು. ನಮ್ಮ ಮನೆಯಿಂದ ಫ್ರಾಸಾ.3 ರವರ ಮನೆ 3 ವರೆ ಕಿಮೀ ಇದೆ. ಫ್ರಾಸಾ. 3 ರವರ ಮನೆಯಲ್ಲಿ ನಡೆದ ಮದುವೆ ಮಾತುಕತೆಗಿಂತ ಮೊದಲು ನಾನು ಸದರಿ ಮಾತುಕತೆಯ ಬಗ್ಗೆ ಹೋಗಿಲ್ಲ. ನಮ್ಮ ಜಾತಿಯಲ್ಲಿ ಅವರವರಿಗೆ ತಕ್ಕಂತೆ ಮದುವೆಯಲ್ಲಿ ಕೊಡುವುದು ತೆಗೆದುಕೊಳ್ಳುವ ಪದ್ಧತಿ ಇರುತ್ತದೆ ಎಂದರೆ ಸರಿ. ಅದನ್ನು ವರೋಪಚಾರ ಎಂದು ಕರೆ ಯುತ್ತಾರೆ ಎಂದರೆ ಸರಿ. ವರೋಪಚಾರಕ್ಕೆ ಮಧ್ಯಸ್ತಿಕೆದಾರರ ಅವಶ್ಯಕತೆ ಇರುವುದಿಲ್ಲ. ನಾನು, ನಂಜಯ್ಯ, ನಮ್ಮ ಊರಿನವರು ಸದರಿ ಮದುವೆ ಮಾತುಕತೆಗೆ ಫ್ರಾಸಾ.3 ರವರ ಮನೆಗೆ ಹೋಗಿದ್ದೆವು. ಸದರಿ ಮದುವೆ ಮಾತುಕತೆಗಿಂತ ಮೊದಲು ಆರೋಪಿತರನ್ನು ನಾನು ನೋಡಿಲ್ಲ. 2 ನೇ ಆರೋಪಿಯು, ಒಡವೆ ನೀಡುವ ಬಗ್ಗೆ ಹಾಗೂ ಹಣ ನೀಡುವ ಬಗ್ಗೆ ಸದರಿ ಮದುವೆ ಮಾತುಕತೆಯಲ್ಲಿ ಕೇಳಿರುತ್ತಾರೆ. ಫ್ರಾಸಾ.3 ರವರ ಕುಟುಂಬದವರು ಸಾಮಾನ್ಯ ಸ್ತಿತಿವಂತರಾಗಿದ್ದರು. 2 ನೇ ಆರೋಪಿಯು ಸದರಿ ಮದುವೆ ಮಾತುಕತೆಯಲ್ಲಿ ಒಡವೆ ಮತ್ತು ಹಣದ ಬಗ್ಗೆ ಕೇಳಿದಾಗ, ನಂಜಯ್ಯ ರವರು ಮಧ್ಯ ಪ್ರವೇಶ ಮಾಡಿರುತ್ತಾರೆ. ನಂಜಯ್ಯ ರವರು ಮಧ್ಯ ಪ್ರವೇಶಿಸಿ, ಈಗ ಒಂದು ಉಂಗುರ ಹಾಗೂ ಬ್ರಾಸ್ಲೈಟ್ ಕೊಡುತ್ತೇವೆ ಎಂದು ಹೇಳಿದ್ದರು. ಸದರಿ ವಿಚಾರಕ್ಕೆ ಆರೋಪಿತರು ಒಪ್ಪಿಕೊಂಡಿರುತ್ತಾರೆ. ಸದರಿ ಮದುವೆ ಮಾತಕತೆಯ ನಂತರ ನಮ್ಮ ಊರಿನಲ್ಲಿ ಪಂಚಾಯ್ತಿ ಆಗಿಲ್ಲ.

15. ನನ್ನ ಸಮಕ್ಷಮದಲ್ಲಿ ಒಡವೆಗಳನ್ನು ಆರೋಪಿತರಿಗೆ ನೀಡಿಲ್ಲ. ಸದರಿ ಮದುವೆ ಮಾತುಕತೆಯ ಪೋಟೋ, ವೀಡಿಯೋ, ಫ್ರಾಸಾ.3 ರವರ ಬಳಿ ಇರಬಹುದು. ಮದುವೆಯಾದ ನಂತರ ಮಾಲಿನಿಯನ್ನು ನೋಡಲು ನಾನು ವಡ್ಡರಹಳ್ಳಿಗೆ ಹೋಗಿಲ್ಲ. ಸದರಿ ಮಾಲಿನಿ ತವರು ಮನೆಗೆ ಬಂದಾಗ, ಆಕೆಯನ್ನು ನಾನು ವಿಚಾರಿಸಿಲ್ಲ. ಸದರಿ 2 ನೇ ಆರೋಪಿಯನ್ನು ನಾನು ಮಾಲಿನಿ ತೀರಿಕೊಂಡ ಬಗ್ಗೆ ವಿಚಾರಿಸಿಲ್ಲ. ಮಾಲಿನಿ ತೀರಿಕೊಂಡ 3 ದಿನಗಳ ನಂತರ ಮಳವಳ್ಳಿ ಠಾಣೆಯಲ್ಲಿ ಹೇಳಿಕೆಯನ್ನು ನೀಡಿದ್ದೆನು. ನಾನು ಹೇಳಿಕೆಯನ್ನು ನೀಡುವ ಸಮಯದಲ್ಲಿ ನಂಜಯ್ಯ ರವರು ಸಹ ಹೇಳಿಕೆಯನ್ನು ನೀಡಿದ್ದರು. ಆರೋಪಿತರು ಮಾಲಿನಿಗೆ ಕಿರುಕುಳ ನೀಡುತ್ತಿದ್ದರೆಂದು ಅವರಿಗೆ ಬುದ್ದಿವಾದ ಹೇಳಬೇಕೆಂದು ಫ್ರಾಸಾ. 3 ರವರು ನನಗೆ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮದುವೆ ಮಾತುಕತೆಯಲ್ಲಿ ಮದುವೆ ಯಲ್ಲಿ ಒಡವೆ ಮತ್ತು ಹಣ ಕೊಡುವ ಬಗ್ಗೆ ಒತ್ತಾಯ

ಪಡಿಸಿರಲಿಲ್ಲ, ನಂಜಯ್ಯ ರವರು ಮಧ್ಯ ಪ್ರವೇಶಿಸಿ, ಉಂಗುರ ಮತ್ತು ಬ್ರಾಸ್ ಲೈಟ್ ಕೊಡುತ್ತೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

16. 2 ನೆ ಆರೋಪಿಯು ಕೆ ಇ ಬಿ ಇಲಾಖೆಯಲ್ಲಿ ಕೆಲಸದಲ್ಲಿ ಇದ್ದಾರೆ ಎಂದು ಗೊತ್ತು. ಅವರಿಗೆ ಕೈ ತುಂಬ ಸಂಬಳ ಬರುತ್ತಿದ್ದು, ಅವರು ವರದಕ್ಷಿಣೆಗಾಗಿ ಒತ್ತಡ ಮಾಡುವ ಸಂಭವವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮಾಲಿನಿಗೆ ಅಥವಾ ಅವರ ಮನೆಯವರಿಗೆ ಒಡವೆ ಮತ್ತು ಹಣಕ್ಕೆ ಒತ್ತಡ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಶೇಖರ್ ರವರು ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮದುವೆ ಮಾತುಕತೆಗೆ ಸೇರಿಲ್ಲ, ನಾನು ಹೇಳುವಂತೆ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ.

17. ಮಾಲಿನಿ ತೀರಿಕೊಂಡ ವಿಚಾರ, ನನಗೆ ಊರಿನವರ ಮೂಲಕ ತಿಳಿದು ಬಂದಿರುತ್ತದೆ. ಮಾಲಿನಿ ತೀರಿಕೊಳ್ಳುವ ಮೊದಲು ಫ್ರಾಸಾ. 3 ರವರು ನಮ್ಮನ್ನು ಕರೆದು, ಯಾವುದೇ ಮಾತುಕತೆ ಆಗಿಲ್ಲ. ಮಾಲಿನಿ ಯಾವ ಕಾರಣಕ್ಕೆ ತೀರಿಕೊಂಡಳೆಂದು ನನಗೆ ತಿಳಿದಿಲ್ಲ ಎಂದರೆ ಸರಿ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.